ಬಹುತೇಕ ಈ ರಸ್ತೆ ಉಬ್ಬುಗಳಿಗೆ ಬಿಳಿ ಹಾಗು ಹಳದಿ ಬಣ್ಣಗಳನ್ನು ಬಳಿದಿರುವುದಿಲ್ಲ. ಇದರಿಂದ ವಾಹನ ಚಾಲಕರಿಗೆ ಈ ರಸ್ತೆ ಉಬ್ಬುಗಳ ಬಗ್ಗೆ ಯಾವುದೇ ಮುನ್ಸೂಚನೆ ಇಲ್ಲದೆ ಅಪಘಾತಗಳು ಉಂಟಾಗಲು ಕಾರಣವಾಗಿದೆ. ಇದರ ಜೊತೆಗೆ ಈ ರಸ್ತೆ ಉಬ್ಬುಗಳ ಬಗ್ಗೆ ಒಂದು ಎಚ್ಚರಿಕೆ ಬೋರ್ಡುಗಳನ್ನು ಹಾಕುವುದು ಅತಿ ಅವಶ್ಯಕವಾಗಿದೆ. ಆದ್ದರಿಂದ ಬೆಂಗಳೂರು ನಗರ ಸಂಚಾರಿ ಪೋಲೀಸ್ ವಿಭಾಗದವರಿಗೆ ಹೆಚ್ಚಿನ ಹಣವನ್ನು ಒದಗಿಸಿ, ಕೂಡಲೇ ಎಲ್ಲ ರಸ್ತೆ ಉಬ್ಬುಗಳಿಗೆ ಬಣ್ಣಗಳನ್ನು ಹಾಕಲು ಹಾಗು ಎಚ್ಚರಿಕೆ ಬೋರ್ಡುಗಳನ್ನು ಹಾಕಲು ಕ್ರಮ ಕೈಗೊಳ್ಳಬೇಕೆಂದು ಸನ್ಮಾನ್ಯ ಗೃಹ ಸಚಿವರನ್ನು ಕೋರುತ್ತೇನೆ.

ಶ್ರೀ ಧರ್ಮಸಿಂಗ್ (ಗೃಹಸಚಿವರು) : ಮಾನ್ಯ ಉಪಾಧ್ಯಕ್ಷಿಣಿಯವರೆ, ತಮ್ಮ ಅಪ್ಪಣೆ ಪಡೆದು ಈ ಹೇಳಿಕೆಯನ್ನು ನೀಡಬಯಸುತ್ತೇನೆ.

ಬೆಂಗಳೂರು ನಗರ ಸಂಚಾರ ವಿಭಾಗದ ಪೋಲೀಸರು ಬೆಂಗಳೂರು ನಗರ ಪಾಲಿಕೆಯವರಲ್ಲಿ ಚರ್ಚಿಸಿ, ಬೆಂಗಳೂರು ನಗರದಲ್ಲಿರುವ ರಸ್ತೆಗಳಲ್ಲಿ ಮತ್ತು ಸಾರ್ವಜನಿಕರು ವಾಸಸುವ ಕೆಲವು ಸ್ಥಳಗಳಲ್ಲಿ ವಾಹನಗಳ ವೇಗವನ್ನು ಕಡಿಮೆ ಮಾಡುವ ಸಲುವಾಗಿ ರಸ್ತೆಯ ಉಬ್ಬರಗಳನ್ನು ನಿರ್ಮಿಸಿರುತ್ತಾರೆ. ಈ ಬಗ್ಗೆ ಬೆಂಗಳೂರು ನಗರದಲ್ಲಿ 140 ಕಡೆ ರಸ್ತೆಯ ಉಬ್ಬರಗಳನ್ನು ನಿರ್ಮಿಸುತ್ತಾರೆ. ವಾಹನ ಚಾಲಕರಿಗೆ ಎಚ್ಚರಿಕೆಯ ಮುನ್ಸೂಚನೆ ನೀಡಲು ಉಬ್ಬರಗಳ ಮೇಲೆ ಅನೇಕ ಕಡೆ ಬಿಳಿ ಬಣ್ಣವನ್ನು ಹಾಕಿಸಿರುತ್ತೆ, ಕೆಲವು ಕಡೆಗಳಲ್ಲಿ ರಸ್ತೆಯ ಉಬ್ಬರಗಳಲ್ಲಿ ಅಲ್ಲಲ್ಲಿ ಬಿಳಿ ಬಣ್ಣ ಅಳಿಸಿ ಹೋಗಿರುತ್ತೆ. ಬಿಳಿ ಬಣ್ಣ ಹಚ್ಚಲು ಮತ್ತು ಎಚ್ಚರಿಕೆಯ ಸೂಚನಾ ಫಲಕಗಳನ್ನು ಹಾಕಲು ಬೆಂಗಳೂರು ನಗರ ಪಾಲಿಕೆಯವರು ಸಾಕಾಗುವಷ್ಟು ಬಣ್ಣವನ್ನು ಪೋಲೀಸ್ ಇಲಾಖೆಗೆ ಒದಗಿಸುತ್ತಾರೆ, ಹಾಗೂ ಪೋಲೀಸ್ ಇಲಾಖೆ (ಸಂಚಾರಿ ವಿಭಾಗ) ಬಣ್ಣ ಹಚ್ಚುವ ಕಾರ್ಯವನ್ನು ನಿರ್ವಹಿಸುತ್ತದೆ. ಈ ಕೆಲಸವನ್ನು ಈಗಾಗಲೇ ಎಷ್ಟೋ ಕಡೆ ಮಾಡಲಾಗಿದೆ ಮತ್ತು ಮಾಡಲಾಗುತ್ತಿದೆ. ಈ ಬಗ್ಗೆ ಬೆಂಗಳೂರು ನಗರದಲ್ಲಿ ವಿಶೇಷ ರೀತಿಯ ತಪಾಸಣೆ ಮಾಡಿ, ಅವಶ್ಯಕತೆ ಇರುವ ಇತರೆ ಎಲ್ಲಾ ಸ್ಥಳಗಳಲ್ಲೂ ರಸ್ತೆಯ ಉಬ್ಬರಗಳನ್ನು ಮತ್ತು ಎಚ್ಚರಿಕೆಯ ಸೂಚನಾ ಫಲಕಗಳನ್ನು ಹಾಕಿಸಿ ಬಿಳಿ ಬಣ್ಣವನ್ನು ಹಚ್ಚಲು ಕ್ರಮ ಕೈಗೊಳ್ಳಲಾಗುವುದು.

(4) ಹಾರೋಬಂಡೆ ಕಲ್ಲು ಒಡೆಯುವವರ ಕೈಗಾರಿಕಾ ಸೇವಾ ಸಂಘ

ಶ್ರೀ ಸಿ.ವಿ. ವೆಂಕಟರಾಯಪ್ಪ (ಬಾಗೇಪಲ್ಲಿ) : ಮಾನ್ಯ ಉಪಾಧ್ಯಕ್ಷರೆ, ಹಾರೋಬಂಡೆ ಕಲ್ಲು ಒಡೆಯುವವರ ಕೈಗಾರಿಕಾ ಸೇವಾ ಸಂಘ, ಲಿಂಗಶೆಟ್ಟಿಪುರ, ಚಿಕ್ಕಬಳ್ಳಾಪುರ ತಾಲ್ಲೂಕು- ಇವರು ಹಾರೋಬಂಡೆ ಪ್ರದೇಶದಲ್ಲಿರತಕ್ಕ ಕಲ್ಲು ಬಂಡೆಗಳನ್ನು ಒಡೆದು ಸಾಗಿಸಲು 1975ರಲ್ಲಿ ಜಿಯಾಲಜಿ ಇಲಾಖೆಯಿಂದ ಪರವಾನಗಿ ತೆಗೆದುಕೊಂಡಿರುತ್ತಾರೆ. ಅಂದಿನಿಂದ ಕೆಲವು ವರ್ಷಗಳ ಕಾಲ ಲಾರಿ ಒಂದಕ್ಕೆ 5 ರಿಂದ 10 ರೂಪಾಯಿಗಳ ವರೆಗೆ ಸುಂಕ ವಸೂಲ್ಮಾಡುತ್ತಿದ್ದರು. 1980ರಿಂದ ಈಚೆಗೆ 30ರಿಂದ 40ರೂಪಾಯಿಗಳವರೆಗೆ ವಸೂಲ್ಮಾಡಿಕೊಂಡು ಅದರಲ್ಲಿ ಬಹಳ ಕಡಿಮೆ ಮೊತ್ತವನ್ನು ಸಂಘಕ್ಕೆ ಜಮಾ ಮಾಡಿಕೊಳ್ಳುತ್ತಿದ್ದರು. ಸಾರ್ವಜನಿಕರಿಂದ ಗಲಾಟೆಗಳು ಜಾಸ್ತಿ ಆದಮೇಲೆ ಬಂಡೆಗಳ ಸುಂಕ ವಸೂಲಿ ಹಕ್ಕನ್ನು ಹರಾಜು ಮಾಡುವ ನೆಪದಲ್ಲಿ ಮೊಹೆಯಾನ ಸುಮಾರು ಒಂದು ಸಾವಿರ ರೂಪಾಯಿಗಳ ಮೊತ್ತಕ್ಕೆ ನಿಲ್ಲಿಸಿಕೊಂಡು ವಸೂಲಿ ಹಕ್ಕನ್ನು ಚಿಕ್ಕಬಳ್ಳಾಪುರ ಟೌನಿನ ಪೈಲ್ವಾನರಿಗೆ ಕೊಟ್ಟಿರುತ್ತಾರೆ. ಇದರಿಂದ ಸಂಘಕ್ಕೆ ಮಾಹೆಯಾನ ಸುಮಾರು 40000 ರೂಪಾಯಿಗಳು ನಷ್ಟವಾಗಿರುತ್ತೆ. ಈ ಬಗ್ಗೆ ಸಾರ್ವಜನಿಕರು ದೂರು ಕೊಟ್ಟದ್ದರ ಮೇಲೆ ಅಡೀಷನಲ್ ಡೈರೆಕ್ಟರ್ ಆಫ್ ಇಂಡಸ್ಟ್ರೀಸ್ ಅಂಡ್ ಕಾಮರ್ಸ್ ಹಾಗೂ ಎಕ್ಸ್-ಅಪಿಷಿಯೋ ರಿಜಿಸ್ಟ್ರಾರ್ ಆಫ್ ಕೊ-ಆಪರೇಟಿವ್ ಸೊಸೈಟೀಸ್ ಅವರು

ತಮ್ಮ ಆಫೀಸ್‌ನಿಂದ ಒಬ್ಬ ಅಸಿಸ್ಟೆಂಟ್ ರಿಜಿಸ್ಟ್ರಾರ್‌ರವರನ್ನು ತನಿಖೆಗಾಗಿ ಕಳಿಹಿಸಿ ಬಂದಿರುವ ದೂರುಗಳನ್ನು ನಿಜಾಂಶ ಇದೆ ಎಂದು ಖಚಿತಪಡಿಸಿಕೊಂಡಿರುತ್ತಾರೆ. ಈ ಬಗ್ಗೆ ಸರ್ಕಾರಕ್ಕೆ ಒಂದು ಕಾಗದ ಬರೆದಿರುತ್ತಾರೆ. ಅದರಲ್ಲಿ ಸರ್ಕಾರ ಸಹಕಾರ ಸಂಘಗಳ ಸೆಕ್ಷನ್ 30ಎ ಪ್ರಕಾರ ಒಬ್ಬ ಸ್ಪೆಶಲ್ ಆಫೀಸರ್‌ರವರನ್ನು ನೇಮಕ ಮಾಡಿಕೊಳ್ಳಬೇಕೆಂದು ತಿಳಿಸಿರುತ್ತಾರೆ. ಈ ಸೆಕ್ಷನ್ ಪ್ರಕಾರ ಸ್ಪೆಶಲ್ ಆಫೀಸರ್‌ರವರು ಸಂಘದ ವ್ಯವಹಾರಗಳನ್ನು ನಡೆಸಲು ಅವರಿಗೆ ಅಧಿಕಾರವಿರುತ್ತದೆ. ಇದಕ್ಕೆ ವಿರೋಧವಾಗಿ ಸರ್ಕಾರದವರು ಸೆಕ್ಷನ್ 30(1)ರ ಪ್ರಕಾರ ಕ್ರಮ ತೆಗೆದುಕೊಳ್ಳಬಹುದೆಂದು ಆದೇಶ ನೀಡಿರುತ್ತಾರೆ. ಇದರಿಂದ ಯಾವ ಪ್ರಯೋಜನವೂ ಆಗುವುದಿಲ್ಲ. ಸಂಘದವರು ಸುಲಭವಾಗಿ ಸ್ಟೇ ಆರ್ಡರ್ ತರುವುದಕ್ಕೆ ಅವಕಾಶವಿರುತ್ತೆ. ಈ ಕೇಸು ಇತ್ಯರ್ಥವಾಗಲು ವರ್ಷಾನುಗಟ್ಟಲೆ ಕಳೆಯುತ್ತೆ. ಸಂಘಕ್ಕೆ ಲಕ್ಷಾಂತರ ರೂಪಾಯಿಗಳು ನಷ್ಟವಾಗುತ್ತೆ. ಇದಕ್ಕೆ ಕೊಡದೆ ಸರ್ಕಾರದವರು ಸೆಕ್ಷನ್ 30ಎ ಪ್ರಕಾರ ಕ್ರಮ ತೆಗೆದುಕೊಳ್ಳಲು ಆದೇಶ ನೀಡಬೇಕಾಗಿ ಕೋರಿದೆ.

ಶ್ರೀ ಎಂ.ಎಲ್. ಉಸ್ತಾದ್(ಗಣಿ ಮತ್ತು ಭೂ ವಿಜ್ಞಾನ ರಾಜ್ಯ ಸಚಿವರು) : ಮಾನ್ಯ ಉಪಾಧ್ಯಕ್ಷರೆ, ಚಿಕ್ಕ ಬಳ್ಳಾಪುರ, ಬಾಗೇಪಲ್ಲಿ ಇವರ ಸಂಘದಲ್ಲಿ ನಡೆದಿರುವ ಲೋಪದೋಷಗಳ ಬಗ್ಗೆ ಒಂದು ವರದಿಯನ್ನು ೩೧-೧೧-೯೦ರಂದು ಸಹಕಾರ ಸಂಘಗಳ ಕಛೇರಿಯಿಂದ ಅಪರ ನಿಬಂಧಕರು, ಕೈಗಾರಿಕಾ ಸಹಕಾರ ಸಂಘಗಳಿಗೆ ವರ್ಗಾಯಿಸಲಾಗಿದೆ. ಈ ಅರ್ಜಿಯನ್ನು ಅಪರ ನಿಬಂಧಕರು, ಕೈಗಾರಿಕ, ಸಹಕಾರಿ ಸಂಘಗಳು ಇವರ ಕಛೇರಿಯಲ್ಲಿ ಕೆಲಸ ಮಾಡುವ ಸಹಾಯಕ ನಿಬಂಧಕರಿಗೆ ತನಿಖೆ ಮಾಡಲು ವಹಿಸಿ ಕೊಟ್ಟಿರುತ್ತಾರೆ. ಸಹಕಾರಿ ಸಂಘಗಳ ಸಹಾಯಕ ನಿಬಂಧರು 23-1-91 ರಂದು ಒಂದು ವರದಿಯನ್ನು ಸಲ್ಲಿಸಿದ್ದಾರೆ ಹಾಗೂ ಆ ವರದಿಯಲ್ಲಿ ಲೋಪ ದೋಷಗಳು ಇರುವುದನ್ನು ತಿಳಿಸಿದ್ದಾರೆ. ಆ ವರದಿಯ ಆಧಾರದ ಮೇಲೆ ರಾಜ್ಯಸರ್ಕಾರದ ಸಹಕಾರ ಇಲಾಖೆಯ ಕಾರ್ಯದರ್ಶಿಯವರಿಗೆ ದಿನಾಂಕ : 27-2-91ರಂದು ಒಂದು ಪ್ರಸ್ತಾವನೆಯನ್ನು ಕಳುಹಿಸಿ ಸಹಕಾರ ಸಂಘಗಳ ಕಾಯಿದೆ 59ರ 30A ಪ್ರಸ್ತಾವನೆಯನ್ನು ಕಳುಹಿಸಲಾಯಿತು. ಈ ಪ್ರಸ್ತಾವನೆಗೆ ಸರ್ಕಾರದಿಂದ ಪತ್ರ ಸಂಖ್ಯೆ: ಸಿಎಂಡಬ್ಲ್ಯೂ : 17 : ಸಿಐಡಬ್ಲ್ಯೂ:90 ದನಾಂಕ : 24-4-90ರಂದು 30(1) ಕಾಲಂ ಸಹಕಾರ ಸಂಘಗಳ ಕಾಯಿದೆ ಪ್ರಕಾರ ಕ್ರಮ ಕೈಗೊಳ್ಳಲು ಸೂಚಿಸಿದೆ. ಸಹಕಾರ ಸಂಘಗಳ ಕಾಯಿದೆ ಕಾಲಂ 30(1) ಅವರ ನಿಬಂಧಕರು ಕೈಗಾರಿಕಾ ಸಹಕಾರ ಸಂಘಗಳು ಇವರಿಗೆ ದತ್ತಕವಾಗಿರದೆ ಇರುವುದರಿಂದ ಸಹಕಾರ ಸಂಘಗಳ ಉಪ ನಿಬಂಧಕರು, ಕೋಲಾರ ಇವರಿಗೆ ಅಧಿಕಾರ ಚಲಾಯಿಸಲು ಪತ್ರ ಸಂಖ್ಯೆ : ಐಸಿಎಸ್-2:ಎ3:36: ರದ್ದತಿ:89-90 ದಿನಾಂಕ 11-5-90 ರಂದು ಪತ್ರ ಬರೆದು ಸೂಚಿಸಿದ್ದಾರೆ. ಈ ಪತ್ರದ ಪ್ರಕಾರ ಕ್ರಮ ಕೈಗೊಳ್ಳಲು ಸಹಕಾರ ಸಂಘಗಳ ಉಪ ನಿಬಂಧಕರು, ಕೋಲಾರ ಇವರು ಸುಮಾರು 7 ತಿಂಗಳ ಅವಧಿ ತೆಗೆದುಕೊಂಡು ಈ ಸಂಘದ ಕಾರ್ಯಕಾರಿ ಸಮಿತಿಯನ್ನು ವಜಾ ಮಾಡಬಾರದೇಕೆ ಎಂಬ ನೋಟಿಸನ್ನು ಕ್ರಮ ಸಂಖ್ಯೆ : ಡಿಆರ್‌ಕೆ:ಹೆಚ್‌ಪಿಕೆ:ಎಸ್‌ಎಸ್‌ಎನ್:61:90:91 ದಿನಾಂಕ: 26-12-90 ರಂದು ಎಲ್ಲಾ ಆಡಳಿತ ಮಂಡಳಿಯ ಸದಸ್ಯರಿಗೂ ಕೊಟ್ಟಿರುತ್ತಾರೆ. ಈ ಬಗ್ಗೆ ಕೈಗೊಂಡ ಮುಂದಿನ ಕ್ರಮವನ್ನು ಗೊತ್ತಿಲ್ಲದೆ ಇರುವುದರಿಂದ ಸಹಕಾರ ಸಂಘಗಳ ಉಪ ನಿಬಂಧಕರು, ಕೋಲಾರ ಇವರಿಗೆ 14-2-91 ರಂದು ಪತ್ರ ಬರೆದು ಪ್ರಗತಿಯನ್ನು ಕೇಳಲಾಯಿತು ಹಾಗೂ 27-2-91ರಂದು ಸಹಾಯಕ ನಿಂಬಂಧಕರ ಪತ್ರವನ್ನು ಕಳುಹಿಸಲಾಗಿದೆ. ಈವರೆಗೂ ವರದಿ ಬಂದಿರುವುದಿಲ್ಲ.